ಇದೆ. ನಾಲ್ವರು ವ್ಯಕ್ತಿಗಳನ್ನು ಹಿಡಿಯಲು ಪ್ರಯಾಸಪಟ್ಟಿದ್ದರಿಂದ ಹೆಚ್ಚು ಶಕ್ತಿ ವ್ಯಯವಾಗಿ ಬ್ಯಾಟರಿ ಡೌನ್ ಆಗಿದೆ. ನನ್ನನ್ನು ವರ್ಕ್‌ಶಾಪ್‌ಗೆ ಕಳುಹಿಸಲು ವ್ಯವಸ್ಥೆ ಮಾಡು'.

ಅದರ ಅಹವಾಲು ಸಹಜವಾಗಿತ್ತು. ತಾವು ಗಸ್ತು ತಿರುಗುತ್ತಿರುವಾಗ ನಡುವೆ ಬ್ಯಾಟರಿ ಸಂಪೂರ್ಣ ನಿಂತುಹೋದರೆ ತಾವು ಮಾಡುತ್ತಿರುವ ಕಾರ್ಯವು ಸ್ಥಗಿತಗೊಳ್ಳುತ್ತಿತ್ತು. 'ಎಕ್ಸ್' ರೊಬೋ ಕಾಪ್‌ನ ಅಹವಾಲಿಗೆ ಹನ್ನಾ ಪ್ರತಿಕ್ರಿಯಿಸಲೇಬೇಕಿತ್ತು. ಅದಕ್ಕೂ ಮುನ್ನ 'ವೈ' ರೊಬೋವನ್ನು ಕೇಳಿಯೇಬಿಟ್ಟಳು. 'ನಿನ್ನ ಸ್ಥಿತಿ ಹೇಗಿದೆ?'

'ನನ್ನ ಮೇಲೆ ಸಹ ಪ್ರಹಾರವಾಗಿದೆ ಹನ್ನಾ. ಆ ಪ್ರಹಾರದಿಂದ ತಪ್ಪಿಸಿಕೊಳ್ಳಲು ನನ್ನ ಕೈಗಳನ್ನು ಅಡ್ಡ ಹಿಡಿದಿದ್ದರಿಂದ ಕೈಗಳು ಡ್ಯಾಮೇಜ್ ಆಗಿವೆ. ಆದರೂ ಸಹ ನನ್ನ ಸ್ಥಿತಿ ಗಸ್ತು ಮುಂದುವರೆಸಲು ಶಕ್ತವಾಗಿದೆ'.

ತನ್ನ ಸಹಚರರ ಅಹವಾಲು ಕೇಳಿ ಒಂದು ನಿರ್ಧಾರಕ್ಕೆ ಬಂದವಳಂತೆ ಎಂ.ಪಿ. ವಾಕಿಯಲ್ಲಿ ಸಂಚಾರ ನಿಯಂತ್ರಣ ಕೊಠಡಿಯಲ್ಲಿದ್ದ ಏರ್ ವ್ಯಾನನ್ನು ತುರ್ತಾಗಿ ತಾನಿದ್ದೆಡೆ ಕಳುಹಿಸುವಂತೆ ಕೋರಿಕೆ ಸಲ್ಲಿಸಿದ್ದಳು. ಜೊತೆಗೆ ಸ್ಟ್ಯಾಂಡ್ ಬೈ ರೊಬೋ ಕಾಪ್ ಕರೆತರುವಂತೆ ಆದೇಶ ನೀಡಿದಳು.

ಆ ರಾತ್ರಿ ವಿಪರೀತ ಘಟನೆಗಳಿಗೆ ಮುನ್ಸೂಚನೆ ನೀಡುವಂತೆ ತೋರಿ ಎಂ.ಪಿ. ವಾಕಿಯಲ್ಲಿ ತನ್ನ ಪ್ರದೇಶಕ್ಕೆ ಸಮೀಪದಲ್ಲಿ ಗಸ್ತು ತಿರುಗುತ್ತಿದ್ದ ಮತ್ತೊರ್ವ ಟ್ರಾಫಿಕ್ ವಾರ್ಡನ್‌ಗೆ 'ಎಚ್ಚರಿಕೆಯ' ಸಂದೇಶ ರವಾನೆಯಾಗಿತ್ತು. ತಾನಿನ್ನು ಈ ಬೆಲೆ ಬಾಳುವ ವಸ್ತುಗಳ ಖಜಾನೆಯಂತಿರುವ ಈ ಪ್ರದೇಶವನ್ನು ಕಣ್ಣೆವೆಯಿಕ್ಕದೆ ಕಾಯುವುದು ಕೇವಲ ಈರ್ವರು ರೊಬೋಗಳಿಂದಷ್ಟೇ ಸಾಧ್ಯವಾಗದೆನಿಸಿತ್ತು. ಪ್ರವೇಶದ್ವಾರದಲ್ಲಿಯೇ ಈ ನೀರವ ರಾತ್ರಿಯಲ್ಲಿ ಯಾವುದಾದರೊಬ್ಬ ವ್ಯಕ್ತಿ ಅಥವಾ ವಾಹನವು ಒಳಹೋಗಲು ಪ್ರಯತ್ನಿಸುತ್ತಿರುವ ವಿಚಾರ ತಿಳಿಸುವಂತೆ ಭದ್ರತಾ ವ್ಯವಸ್ಥೆಯ ಸಾಫ್ಟ್‌ವೇರ್‌ಗೆ ನಿರ್ದೇಶನ ನೀಡಿ ಮತ್ತೊಂದು ಸುತ್ತಿಗೆ ಅಣಿಯಾದಳು.

ಅವಳನ್ನು ಶೀಘ್ರದಲ್ಲಿಯೇ ಸಮಯ ಪಾಲಕ ರೊಬೋ ಕಾಪ್ ಒಂದು ನಿಯಂತ್ರಣ ಕೊಠಡಿಯಿಂದ ಏರ್‌ವ್ಯಾನ್ ಮೂಲಕ ಅವಳ ಜೊತೆಗೂಡಿ ತನ್ನ ಪರಿಚಯವನ್ನು ಅರುಹಿತ್ತು.

'ನೈಟ್ ರೋಬೋ ಹಿಯರ್'.

ಎಕ್ಸ್ ರೊಬೋವನ್ನು ಅದೇ ಏರ್ ವ್ಯಾನ್‌ನಲ್ಲಿ ವರ್ಕ್‌ಶಾಪ್‌ಗೆ ಕಳುಹಿಸುವಷ್ಟರಲ್ಲಿ ಘಟನೆ ಜರುಗಿದ ಅಂಗಡಿ ಮಳಿಗೆಯ ಮಾಲೀಕನ ಆಗಮನವೂ ಆಗಿತ್ತು. ಅಂಗಡಿಯ ಮುಂದೆ ಪ್ರದರ್ಶನದ ಗೊಂಬೆಯಂತಿದ್ದ ಮನುಷ್ಯಾಕೃತಿಯ ರೊಬೋ ಗೊಂಬೆಗಳ ಮೇಲೆ ಘನ ವಸ್ತುವಿನಿಂದ ಹೊಡೆದಿರುವುದನ್ನು ನೋಡಿದ ದುಷ್ಕರ್ಮಿಗಳು ಯಾವುದೋ ದ್ವೇಷ ಸಾಧನೆಗೆ ಈ ಕೃತ್ಯವೆಸಗಿರುವ ಅನುಮಾನ ನೆರೆದವರಲ್ಲಿ ಮೂಡಿತ್ತು. ಇಲ್ಲದಿದ್ದರೆ ಬಾಗಿಲನ್ನು ಒಡೆದು ಒಳಗೆ ಸಂಗ್ರಹವಾಗಿರುವ ವಿವಿಧ ವಿನ್ಯಾಸದ ರೊಬೋಗಳನ್ನು ಕದ್ದು, ಬೇರೆಡೆ ಕೊಂಡೊಯ್ದು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದರು. ಇಲ್ಲಿ ಹಾಗಾಗಿರಲಿಲ್ಲ!

ಆಪತ್ಕಾಲಕ್ಕೆ ಒದಗಿ ಬಂದ ನೈಟ್ ರೊಬೋ ಕ್ಯಾಮೆರಾವನ್ನೊಳಗೊಂಡಂತಹ ತಲೆಯ ಭಾಗದಿಂದ ಸುತ್ತಲೂ ನಿರುಕಿಸಿ ದೃಶ್ಯಾವಳಿಗಳನ್ನು ಸೆರೆಹಿಡಿದು ವಿಚಾರಣಾ ತಂಡಕ್ಕೆ ರವಾನಿಸಿತ್ತು. ಅಂಗಡಿಯ ಮಾಲೀಕ ನಂತರ ಒಳಹೊಕ್ಕು ಸ್ವಚ್ಛತಾ ಕಾರ್ಯದಲ್ಲಿ ತೊಡಗಿದಾಗ, ಹನ್ನಾ ತನ್ನ ಕರ್ತವ್ಯವನ್ನು ಮುಂದುವರೆಸಬೇಕಾದ ಅವಶ್ಯಕತೆಯನ್ನು ವ್ಯಕ್ತಪಡಿಸಿದಳು.

'ನೀವು ವಿಚಾರಣಾ ತಂಡದೊಂದಿಗೆ ಸಂಪರ್ಕದಲ್ಲಿರಿ, ಈಗ ನಾನು ಹೊರಡಬೇಕಿದೆ' ಎಂದು ಅಂಗಡಿ ಮಾಲೀಕರಿಗೆ ಹೇಳಿ ತನ್ನ ವಾಹನದೊಳಗೆ ಕುಳಿತು ಗಸ್ತು ಮುಂದುವರಿಸಿದಳು. ಈಗಾಗಲೇ ಸಮಯ ರಾತ್ರಿ ಒಂದೂವರೆ ಗಂಟೆ ದಾಟಿದ್ದು, ಇನ್ನು ಬೆಳಗಿನ ಜಾವದವರೆಗೂ ಎಚ್ಚರದಿಂದಿರುವ ಅವಶ್ಯಕತೆ ಇತ್ತು. ಅವಳು ರೊಬೋಟ್ ಮಾರಾಟದ ಅಂಗಡಿಗಳಿದ್ದ ರಸ್ತೆ ದಾಟಿ, ವಸ್ತ್ರ ಮಾರಾಟದ ಅಂಗಡಿಗಳಿದ್ದ ರಸ್ತೆಗೆ ತಿರುವು ಪಡೆಯುತ್ತಿದ್ದಂತೆಯೇ ಪ್ರವೇಶ ದ್ವಾರದ ಭದ್ರತಾ ವ್ಯವಸ್ಥೆಯಿಂದ ಎಚ್ಚರಿಕೆಯ ಮೊರೆತ ಕೇಳಿಬಂದಿತ್ತು. ಎಂ.ಪಿ. ವಾಕಿಯಲ್ಲಿ ಪ್ರವೇಶ ದ್ವಾರದ ಬಳಿ ಜನ ಸೇರ್ಪಡೆಯಾಗುತ್ತಿರುವ ದೃಶ್ಯವನ್ನು ರಿಯಲ್ ಟೈಮ್‌ನಲ್ಲಿ ವೀಕ್ಷಿಸಿದ ಹನ್ನಾಳಿಗೆ ಇದಾವುದೋ ಅಪಾಯದ ಮುನ್ಸೂಚನೆ ಎನ್ನಿಸಿತು. ಪ್ರವೇಶ ದ್ವಾರವನ್ನು ಮುಚ್ಚಲು ಭದ್ರತಾ ವ್ಯವಸ್ಥೆಗೆ ಸೂಚನೆ ನೀಡಿದಳು. ಈ ಸಂದರ್ಭದಲ್ಲಿ ಕೂಡಲೇ ವಾಹನವನ್ನು ಹಿಂದಕ್ಕೆ ತಿರುಗಿಸಿ ಪ್ರವೇಶದ್ವಾರದ ಕಡೆ ಚಲಿಸಿದಾಗ ನಿಧಾನವಾಗಿ ಕೂಡುತ್ತಿದ್ದ ಜನರು ತಮ್ಮೊಳಗೇ ಏನನ್ನೋ ಮಾತನಾಡಿಕೊಳ್ಳುತ್ತಿದ್ದು, ಅವಳ ಆಗಮನವಾಗುತ್ತಿದ್ದಂತೆಯೇ ಘೋಷಣೆಗಳನ್ನು ಕೂಗತೊಡಗಿದ್ದರು.




## ಆಡಿಯೊ- ವೀಡಿಯೊ

ಜನಸಾಮಾನ್ಯರ ಜೀವನ
ನಡೆಯುತ್ತಿದೆ
ಕಾಡಿಯೋ ಬೇಡಿಯೋ;
ಜನನಾಯಕರದು ಬರೀ
ಆಡಿಯೊ– ವೀಡಿಯೊ!

■ ಮಹಾಂತೇಶ ಮಾಗನೂರ

ಪ್ರವೇಶ ದ್ವಾರದಲ್ಲಿ ಮೇಲೆದ್ದ ಕಂಬಿಗಳು ಜನರು ಒಳ ನುಸುಳದಂತೆ ತಡೆದಿದ್ದವಾದರೂ, ಅವರ ಚಲನವಲನಗಳನ್ನು ಅವಳು ವೀಕ್ಷಿಸಬಹುದಾಗಿತ್ತು.

'ಶಾಂತವಾಗಿರಿ. ಈ ಅವೇಳೆಯಲ್ಲಿ ನೀವೆಲ್ಲಾ ಯಾಕಿಲ್ಲಿ ಜಮಾಯಿಸಿದ್ದೀರಿ? ಏನಾಗಬೇಕಿದೆ ನಿಮಗೆ?' ಎಂದು ಪ್ರಶ್ನಿಸಿದಳು. ಅವಳ ಮಾತಿಗೆ ಕಿವಿಗೊಡದಂತೆ ಅವರು ಘೋಷಣೆ ಕೂಗುವುದನ್ನು ಮುಂದುವರೆಸಿದ್ದರು.

'ಅಮಾಯಕರ ಸೆರೆಯಾಗಿದೆ. ಬಂಧಿಸಿದವರನ್ನು ಬಿಡುಗಡೆಗೊಳಿಸುವವರೆಗೂ ನಾವು ಈ ಜಾಗ ಬಿಟ್ಟು ಕದಲುವುದಿಲ್ಲ... ಅರೆ ಮಾನವ ಪಡೆಯ ಸದಸ್ಯರುಗಳನ್ನು ಹೊರಗೆ ಬಿಡಿ...!' ಇತ್ಯಾದಿ ಘೋಷಣೆಗಳನ್ನು ಕೇಳಿಸಿಕೊಂಡವಳಿಗೆ, ಕೆಲಹೊತ್ತಿನ ಹಿಂದೆ ತಾನು ಸೆರೆ ಹಿಡಿದು ವಿಚಾರಣಾ ತಂಡಕ್ಕೆ ಕಳುಹಿಸಿಕೊಟ್ಟ ವ್ಯಕ್ತಿಗಳು ಅರೆಮಾನವ ಪಡೆಯ ಸದಸ್ಯರಾಗಿರಬೇಕೆಂಬ ವಿಷಯ ಹೊಳೆಯಿತು.

ಎಲ್ಲವೂ ಒಂದೊಂದಾಗಿ ಅರ್ಥವಾಗತೊಡಗಿತು. 'ಶಾಂತವಾಗಿರಿ...' ಎಂದು ತನ್ನ ಮೌತ್ ಸ್ಪೀಕರ್‌ನಲ್ಲಿ ಕೂಗಿದಾಗ ಘೋಷಣೆ ಕೂಗುತ್ತಿದ್ದ ಅರೆಮಾನವ ಪಡೆ ಕೊಂಚ ವಿಚಲಿತವಾದಂತೆ ಕಂಡು ಬಂದಿತ್ತು.

'ಅಂಗಡಿಯೊಂದರ ಮುಂಭಾಗದ ಗಾಜನ್ನು ಒಡೆದು ಪ್ರದರ್ಶನಕ್ಕಿಟ್ಟ ಮನುಷ್ಯಾಕೃತಿಯ ರೊಬೋಟ್ ಗೊಂಬೆಗಳನ್ನು ಧ್ವಂಸ ಮಾಡಲು ಪ್ರಯತ್ನಿಸಿರುವುದು ತಪ್ಪಲ್ಲವೇ? ಆ ಕೃತ್ಯವೆಸಗಿದವರು ನಿಮ್ಮವರೇ ಆಗಿದ್ದರೆ ವಿಚಾರಣಾ ತಂಡದ ಮುಂದೆ ಹಾಜರಾಗಿ ನಿಮ್ಮ ಹೇಳಿಕೆ ನೀಡಿ. ಅದು ಬಿಟ್ಟು ಅಂಗಡಿ ಮುಂಗಟ್ಟುಗಳಿರುವ ಈ ವ್ಯಾಪಾರಿ ತಾಣದಲ್ಲಿ... ಅದೂ ಈ ಅವೇಳೆಯಲ್ಲಿ ಈ ರೀತಿ ಜಮಾಯಿಸಿ ಘೋಷಣೆ ಕೂಗುತ್ತಾ ಶಾಂತಿಭಂಗ ಉಂಟುಮಾಡುತ್ತಿರುವ ಔಚಿತ್ಯವಾದರೂ ಏನು?'

'ನಮಗೆ ನ್ಯಾಯ ಬೇಕು. ಸೆರೆಹಿಡಿದಿರುವ ನಮ್ಮವರನ್ನು ಬಿಡುಗಡೆ ಮಾಡಿ. ನಮಗೆ ನೌಕರಿ ನೀಡಿ. ನಮ್ಮ ಸಮಸ್ಯೆಗಳನ್ನು ಬಗೆ ಹರಿಸಿ...' ಎಂದು ನಾಯಕನಂತೆ ತೋರಿದ ಅವರಲ್ಲೊಬ್ಬ ಮುಂದೆ ಬಂದು ಬೇಡಿಕೆ ಸಲ್ಲಿಸಿದ.

'ಈ ವೇಳೆಯಲ್ಲಿ ಹೀಗೆ ಗುಂಪುಗೂಡಿ ಬೇಡಿಕೆ ಮುಂದಿಟ್ಟರೆ ಹೇಗೆ... ಕಮೀಷನರ್ ಅವರ ಆನ್‌ಲೈನ್ ಜಾಲಕ್ಕೆ ಸಂಪರ್ಕಿಸಿ ಕೆಂಪು ಸಂದೇಶ ರವಾನಿಸಿ. ಇಲ್ಲದಿದ್ದರೆ ನಾನು ವರದಿ ಸಲ್ಲಿಸಬೇಕಾಗುತ್ತದೆ... ಇಲ್ಲಿ ಸೇರಿರುವ ಇಷ್ಟೂ ಮಂದಿಯ ಗುರುತು ಪಡೆಯಲು ನಮಗೆ ಕಷ್ಟವಾಗುವುದು...'

'ಮೇಡಂ... ಕಮೀಷನರ್‌ರವರಿಗೆ ಹಲವಾರು ಬಾರಿ ಸಂದೇಶ ರವಾನಿಸಿದರೂ ಹಾರಿಕೆಯ ಪ್ರತಿಕ್ರಿಯೆ ಬರುತ್ತಿದೆ. ನಮ್ಮ ಸಮಸ್ಯೆಗೆ ಪರಿಹಾರ ಎಲ್ಲಿಯವರೆಗೆ ದೊರಕುವುದಿಲ್ಲವೋ ಅಲ್ಲಿಯವರೆಗೆ ನಾವು ಈ ಹೋರಾಟವನ್ನು ಮುಂದುವರೆಸುತ್ತೇವೆ' ಎಂದ ಆ ಗುಂಪಿನ ನಾಯಕ. ಅವನ ಮಾತು ಮುಗಿಯುತ್ತಿದ್ದಂತೆ